ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ
DIRECTORATE OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3rd STAGE BANGALORE - 560 085
Email: ntse.dsert-ka@nic.in Website: http://dsert.kar.nic.in
ಡಿಎಸ್‌ಇಆರ್‌ಟಿ DSERT
Phone : 080 - 26422372, 26422373, 26422374, Fax - 26422377

ಸಂಖ್ಯೆ : NTSE/NMMS/27/ಪ .ಸೂ/2015-16 ದಿನಾಂಕ : 21-07-2015

## ಸುತ್ತೋಲೆ

2015-16 ನೇ ಸಾಲಿನ ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಯನ್ನು ( National Talent Search Examination, NTSE ) 10ನೇ ತರಗತಿ ವಿದ್ಯಾರ್ಥಿಗಳಿಗಾಗಿ ಹಾಗೂ ನ್ಯಾಷನಲ್ ಮೀನ್ಸ್-ಕಮ್-ಮೇರಿಟ್ ಸ್ಕಾಲರ್ಷಿಪ್ ಯೋಜನೆ ( National Means-Cum-Merit Scholarship , NMMS ) ಪರೀಕ್ಷೆಯನ್ನು 8ನೇ ತರಗತಿ ವಿದ್ಯಾರ್ಥಿಗಳಿಗಾಗಿ ದಿನಾಂಕ 08-11-2015 ರಂದು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಈ ಸಂಬಂಧ ಪರೀಕ್ಷೆಗಳನ್ನು ನಡೆಸಲು ಜವಾಬ್ದಾರರಾಗಿರುವ **ಕ್ಷೇತ್ರ ಶಿಕ್ಷಣಾಧಿಕಾರಿಗಳು** ಕೆಳಗಿನ ಸೂಚನೆಗಳನ್ನು ತಪ್ಪದೇ ಅನುಸರಿಸುವುದು.

- NTSE ಮತ್ತು NMMS ಸ್ಪರ್ಧಾತ್ಮಕ ಪರೀಕ್ಷೆಗಳ ರೂಪುರೇಷೆಗಳನ್ನು ವ್ಯತ್ಯಾಸಗಳನ್ನು NTSE / NMMS ಪರೀಕ್ಷಾ ಅರ್ಜಿಗಳಲ್ಲಿರುವ ವಿವರಗಳನ್ನು ಅವಲೋಕಿಸಿ ಪೂರ್ಣವಾಗಿ ಅರ್ಥಮಾಡಿಕೊಳ್ಳುವುದು.

- NTSE / NMMS ಪರೀಕ್ಷೆಗಳ ಬಗ್ಗೆ, ನಿಮ್ಮ ವ್ಯಾಪ್ತಿಯ ಎಲ್ಲಾ ಪ್ರೌಢಶಾಲೆಗಳಿಗೆ ಮಾಹಿತಿ ನೀಡಿ, ಮುಖ್ಯೋಪಾಧ್ಯಾಯರ ಸಭೆ ನಡೆಸಿ ಪ್ರತಿ ಶಾಲೆಯಿಂದ ಕಡ್ಡಾಯವಾಗಿ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯುವಂತೆ ಮಾಡುವುದು.
- 2014-15 ನೇ ಸಾಲಿನಲ್ಲಿ ನಿಮ್ಮ ತಾಲ್ಲೂಕಿನಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆಗಿಂತ 2015-16 ನೇ ಸಾಲಿಗೆ ಹೆಚ್ಚಿನ ವಿದ್ಯಾರ್ತಿಗಳನ್ನು ಪರೀಕ್ಷೆ ಬರೆಯುವಂತೆ ಕ್ರಮ ಕೈಗೊಳ್ಳುವುದು.
- NTSE / NMMS ಪರೀಕ್ಷೆಗಳ ಪ್ರಚಾರಕ್ಕೆ **ಸ್ಥಳೀಯ ಸುದ್ದಿ ಮಾಧ್ಯಮಗಳನ್ನು** ಬಳಸಿಕೊಳ್ಳುವುದು.

- ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವ ಸಲುವಾಗಿ NTSE ಮತ್ತು NMMS ಅರ್ಜಿ ನಮೂನೆಗಳನ್ನು ( ಸೂಚನೆಗಳನ್ನು ಹಾಗೂ ವಿವರಣಾ ಪತ್ರ ಸೇರಿ ) DSERT ವತಿಯಿಂದ ಮುದ್ರಿಸಿ ದಿನಾಂಕ 30-07-2015 ರೊಳಗೆ ಡಯಟ್ ಗಳಿಗೆ ಸರಬರಾಜು ಮಾಡಲಾಗುವುದು. ಬಿ.ಇ.ಓ ಗಳು ಡಯಟ್ ಗಳಿಂದ ಅರ್ಜಿ ನಮೂನೆಗಳನ್ನು ಪಡೆಯುವುದು ಅರ್ಜಿ ನಮೂನೆಗಳು ವೆಬ್ ಸೈಟ್ ವಿಳಾಸದಲ್ಲೂ www.dsert.kar.nic.in ಲಭ್ಯವಿದೆ.

- NTSE / NMMS ಪರೀಕ್ಷೆಗಳ ಅರ್ಜಿಗಳನ್ನು ದಿನಾಂಕ 30-07-2015 ರಿಂದ ವಿತರಿಸುವುದು.

- ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ NTSE ಪರೀಕ್ಷೆಗೆ ಕನಿಷ್ಠ 250 ಹಾಗೂ NMMS ಪರೀಕ್ಷೆಗೆ ಕನಿಷ್ಠ 500 **ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ** ನೊಂದಾಯಿಸಲು ಕ್ರಮವಹಿಸುವುದು.

- NTSE ಪರೀಕ್ಷೆಯ ಶುಲ್ಕದ ವಿವರಗಳು : **( 2015-16 ನೇ ಸಾಲಿಗೆ ಪರೀಕ್ಷಾ ಶುಲ್ಕಗಳನ್ನು ಕಡಿಮೆ ಮಾಡಲಾಗಿದೆ )**

| ಸಂಸ್ಥೆಗಳು | ಅರ್ಜಿ ಶುಲ್ಕ | ಪರೀಕ್ಷಾ ಶುಲ್ಕ | |
|---|---|---|---|
| ಸರ್ಕಾರಿ / ಅನುದಾನಿತ ( Government / Aided ) | ಇಲ್ಲ | GM & Others Category students | ರೂ 100 |
| | | SC / ST students | ರೂ 25 |
| ಅನುದಾನರಹಿತ ( Unaided ) | ಇಲ್ಲ | GM & Others Category students | ರೂ 200 |
| | | SC / ST students | ರೂ 50 |

- NMMS ಪರೀಕ್ಷೆಗಯ ಶುಲ್ಕದ ವಿವರಗಳು : **( 2015-16 ನೇ ಸಾಲಿಗೆ ಪರೀಕ್ಷಾ ಶುಲ್ಕಗಳನ್ನು ಕಡಿಮೆ ಮಾಡಲಾಗಿದೆ )**

| **ಸಂಸ್ಥೆಗಳು** | **ಅರ್ಜಿ ಶುಲ್ಕ** | **ಪರೀಕ್ಷಾ ಶುಲ್ಕ** | |
|---|---|---|---|
| ಸರ್ಕಾರಿ / ಅನುದಾನಿತ ( Government / Aided ) | ಇಲ್ಲ | GM & Others Category students | ರೂ 30 |
| | | SC / ST students | ರೂ 15 |

- NTSE / NMMS ಎರಡೂ ಪರೀಕ್ಷೆಗಳ ವಿದ್ಯಾರ್ಥಿಗಳಿಗೆ **ಉಚಿತವಾಗಿ ಅರ್ಜಿ ನಮೂನೆಗಳನ್ನು ವಿತರಿಸುವುದು**. **NMMS ಪರೀಕ್ಷೆಗೆ ಸರ್ಕಾರಿ ಹಾಗೂ ಅನುದಾನಿತ** ಶಾಲೆಯ ಮಕ್ಕಳು ಮಾತ್ರ ಅರ್ಹರಾಗಿರುತ್ತಾರೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯಾವುದೇ **ವಸತಿಯುತ ಶಾಲಾ ವಿದ್ಯಾರ್ಥಿಗಳು NMMS ಪರೀಕ್ಷೆಗೆ ಅರ್ಹರಾಗಿರುವುದಿಲ್ಲ**. ( ಉದಾ : ಮೊರಾರ್ಜಿ ಶಾಲೆ, ಕೇಂದ್ರೀಯ ವಿದ್ಯಾಲಯ, ನವೋದಯ ಶಾಲೆ ಸೈನಿಕ ಶಾಲೆ ಇತ್ಯಾದಿ ).

- NTSE / NMMS ಪರೀಕ್ಷೆಗೆ **ಮೂಲ ಪ್ರತಿಯಾಗಲಿ,ಜೆರಾಕ್ಸ್ ಪ್ರತಿಯಾಗಲಿ ಅಥವಾ NCERT/DSERT ವೆಬ್ ಸೈಟ್** ವಿಳಾಸದಿಂದ ಪಡೆದ ಪ್ರತಿಯಾದರೂ **ಸ್ವೀಕರಿಸಬಹುದು**, ತುಂಬಿದ ಅರ್ಜಿ ಪಡೆಯುವಾಗ ನಿಗದಿ ಪಡಿಸಿರುವ **ಪರೀಕ್ಷಾ ಶುಲ್ಕವನ್ನು** ತಪ್ಪದೇ ಪಡೆಯುವುದು, ಪರೀಕ್ಷಾ ಶುಲ್ಕವನ್ನು **ಡಿ.ಡಿ / ನಗದಾಗಿಯೂ** ಪ ಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ನೀವು ಪಡೆಯಲು **ದಿನಾಂಕ 07-09-2015** ಕೊನೆಯ ದಿನವಾಗಿರುತ್ತದೆ.

- NTSE ಮತ್ತು NMMS ಅರ್ಜಿಯಲ್ಲಿರುವ ಪ್ರವೇಶ ಪತ್ರದ ( ಪುಟ ಸಂಖ್ಯೆ 5 ರ Admission Card ) ಎಲ್ಲಾ ಕಾಲಂಗಳನ್ನು ತುಂಬಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ **ಒಂದು ವಾರ ಮುಂಚಿತವಾಗಿ** ನೀಡಬೇಕು.

- ಪ್ರವೇಶ ಪತ್ರದ ನೊಂದಣಿ ಸಂಖ್ಯೆಯನ್ನು NTSE ಮತ್ತು NMMS ಪರೀಕ್ಷೆಗೆ ಪ್ರತ್ಯೇಕವಾಗಿ ನೀಡಬೇಕು. NTSE ಹಾಗೂ NMMS ಪರೀಕ್ಷೆಗೆ ಪ್ರತ್ಯೇಕವಾಗಿ 0001 ರಿಂದ ನೊಂದಣಿ ಸಂಖ್ಯೆ ಪ್ರಾರಂಭಿಸಬೇಕು. 12 ಅಂಕಿಗಳ ನೊಂದಣಿ ಸಂಖ್ಯೆ ನೀಡುವುದು ಕಡ್ಡಾಯ. ಉದಾ :
  **NTSE** ಪರೀಕ್ಷೆ ವಿದ್ಯಾರ್ಥಿಗಳಿಗೆ **24115 +** ತಾ: ಪರೀಕ್ಷಾ ಕೇಂದ್ರದ ಸಂಕೇತ ( 3 ಅಂಕಿಗಳು) + ವಿದ್ಯಾರ್ಥಿ ನೋಂದಣಿ ಸಂಖ್ಯೆ (4 ಅಂಕಿಗಳು). ಒಟ್ಟು 12 ಅಂಕಿಗಳು.
  **NMMS** ಪರೀಕ್ಷೆ ವಿದ್ಯಾರ್ಥಿಗಳಿಗೆ **14115+** ತಾ: ಪರೀಕ್ಷಾ ಕೇಂದ್ರದ ಸಂಕೇತ ( 3 ಅಂಕಿಗಳು) + ವಿದ್ಯಾರ್ಥಿ ನೋಂದಣಿ ಸಂಖ್ಯೆ (4 ಅಂಕಿಗಳು). ಒಟ್ಟು 12 ಅಂಕಿಗಳು.

- **ಅಪೂರ್ಣವಾಗಿ ಭರ್ತಿ** ಮಾಡಿದ ಅರ್ಜಿ ನಮೂನೆಗಳನ್ನು ನಿಮ್ಮ ಹಂತದಲ್ಲೇ ***ತಿರಸ್ಕರಿಸುವುದು***. ಅರ್ಜಿಯ ಎಲ್ಲಾ ಅಂಶಗಳನ್ನು ಭರ್ತಿ ಮಾಡಲೇಬೇಕು.

- ದಿನಾಂಕ 07-09-2015 ರವರೆಗೆ ಬಂದಂತ ಅರ್ಜಿಗಳ ವಿವರಗಳನ್ನು DSERT ಯು ಪ್ರಕಟಿಸುವ ಸಾಫ್ಟವೇರ್ ನಲ್ಲಿ ( www.schooleducation.kar.nic.in ) ಡೇಟಾ ಎಂಟ್ರಿ ಮಾಡಬೇಕು. ಪ್ರತಿ ವಿದ್ಯಾರ್ಥಿಯ ಅರ್ಜಿ ವಿವರಗಳನ್ನು ಡೇಟಾ ಎಂಟ್ರಿ ಮಾಡಲು ತಲಾ **ರೂ 3.00 ಗಳನ್ನು** ಪರೀಕ್ಷಾ ಸಂದರ್ಭದಲ್ಲಿ ನೀಡಲಾಗುವುದು. NTSE ಹಾಗೂ NMMS ಪರೀಕ್ಷೆಗೆ ಪ್ರತ್ಯೇಕ Software ಇದ್ದು, ಆಯಾ ಪರೀಕ್ಷಾ Software ನಲ್ಲಿಯೇ ಡೇಟಾ ಎಂಟ್ರಿ ಮಾಡುವುದು. **ಈ ಪ್ರಕ್ರಿಯೆಯನ್ನು ದಿನಾಂಕ 30-09-2014 ರೊಳಗೆ ಪೂರ್ಣಗೊಳಿಸಬೇಕು** . ಅರ್ಜಿಗಳ ವಿವರಗಳನ್ನು ಡೇಟಾ ಎಂಟ್ರಿ ಮಾಡಲು ಅರ್ಜಿ ಸ್ವೀಕರಿಸುವ **ಕೊನೆಯ ದಿನದವರೆಗೆ ಕಾಯದೆ, ಪ್ರತಿ ದಿನ ಬಂದಂತಹ ಅರ್ಜಿಗಳನ್ನು SOFTWARE ನಲ್ಲಿ ಡೇಟಾ ಎಂಟ್ರಿ ಪ್ರಕ್ರಿಯೆ ಪ್ರಾರಂಭಿಸಿ**, ಮಾಹಿತಿ ತಪ್ಪಾದಲ್ಲಿ ನೀವೇ ಜವಾಬ್ದಾರರು.

- **Software ನಲ್ಲಿ ಡೇಟಾ ಎಂಟ್ರಿ ಮಾಡಲು ಪ್ರತ್ಯೇಕ USER ID ಮತ್ತು PASSWORD ಅನ್ನು ನಂತರ ದಿನಗಳಲ್ಲಿ ಡಯಟ್ ನೋಡಲ್ ಅಧಿಕಾರಿಗಳು DSERT ಯಿಂದ ಪಡೆದು ಕೊಳ್ಳತಕ್ಕದ್ದು.**

- NTSE ಮತ್ತು NMMS ಪರೀಕ್ಷಾರ್ಥಿಗಳ ನಾಮಯಾದಿಯನ್ನು ( NOMINAL ROLL ) **ನಮೂನೆ - 1 ರಲ್ಲಿ ತಿಳಿಸಿರುವಂತೆ ಆಂಗ್ಲಭಾಷಾ ಅಕ್ಷರಾನುಕ್ರಮವಾಗಿ ( Alphabetical Order )** ಪ್ರತ್ಯೇಕವಾಗಿ ತಯಾರಿಸಿ ಆಯಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳು ದೃಢೀಕರಿಸಿ ಸಂಬಂಧಿಸಿದ ಡಯಟ್ ಗಳಿಗೆ ಒಂದು ಪ್ರತಿಯನ್ನು ಸಲ್ಲಿಸುವುದು. **ನಾಮಯಾದಿ ಕೊನೆಯಲ್ಲಿ ಘೋಷ್ವಾರೆ ನೀಡುವುದು ಕಡ್ಡಾಯ**. ಅದರಲ್ಲಿ ನೀವು ನೀಡುವ ಮಾಹಿತಿಯೇ ಅಂತಿಮ ಎಂದು ಭಾವಿಸಲಾಗುತ್ತದೆ. ನಾಮಯಾದಿಯಲ್ಲಿರುವ **12 ಅಂಕಿಗಳ ನೊಂದಣಿ ಸಂಖ್ಯೆಯನ್ನು ವಿದ್ಯಾರ್ಥಿಯ ಪ್ರವೇಶ ಪತ್ರದಲ್ಲಿ ನಮೂದಿಸಬೇಕು**. ಪ್ರತಿ ವಿದ್ಯಾರ್ಥಿಗೆ ನೊಂದಣಿ ಸಂಖ್ಯೆಯನ್ನು **ಡಿ.ಎಸ್.ಇ .ಆರ್.ಟಿ ವತಿಯಿಂದ ನೀಡಿ SOFTWARE ನಲ್ಲಿ UPLOAD ಮಾಡಲಾಗುವುದು**, ಮುಂದಿನ ಎ ಲ್ಲಾ ಪ್ರಕ್ರಿಯೆಗಳಿಗೆ ಬಳಸಿಕೊಳ್ಳಲಾಗುವುದು, ಬದಲಾವಣೆಗೆ ಅವಕಾಶವಿಲ್ಲ.

- ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಗಳನ್ನು **( ನಮೂನೆ -2 ಮತ್ತು ನಮೂನೆ -3 )** ಭರ್ತಿ ಮಾಡಿ ಒಂದು ಪ್ರತಿಯನ್ನು ಡಯಟ್ ನೋಡಲ್ ಅಧಿಕಾರಿಗಳಿಗೆ ನೀಡುವುದು.

- ನಿಮ್ಮ ಪರೀಕ್ಷಾ ಕೇಂದ್ರದ NTSE ಮತ್ತು NMMS ಪರೀಕ್ಷೆಗಳ ಭರ್ತಿ ಮಾಡಿದ ಅರ್ಜಿಗಳನ್ನು **( ಅರ್ಜಿ ನಮೂನೆಯ ಮೊದಲ ನಾಲ್ಕು ಪುಟಗಳು ಮಾತ್ರ )** ಪ್ರತ್ಯೇಕವಾಗಿ ಬಂಡಲ್ ಮಾಡಿ ದಿನಾಂಕ : 15-10-2015 ರೊಳಗೆ ಸಂಬಂಧಿಸಿದ ಡಯಟ್ ಗಳಿಗೆ ಕಳುಹಿಸುವುದು. **( ಪ್ರವೇಶ ಪತ್ರ ಬಿ.ಇ .ಓ ಕಛೇರಿಯಲ್ಲಿ ಉಳಿಸಿಕೊಳ್ಳುವುದು )**

- ವಿದ್ಯಾರ್ಥಿಗಳಿಂದ ಪಡೆದ ಪರೀಕ್ಷಾ ಶುಲ್ಕವನ್ನು ಕ್ರೋಢೀಕರಿಸಿ **" ನಿರ್ದೇಶಕರು, ಡಿ.ಎಸ್.ಇ .ಆರ್.ಟಿ ಬೆಂಗಳೂರು"** ರವರ ಹೆಸರಿಗೆ ಬ್ಯಾಂಕ್ ಹುಂಡಿ ತೆಗೆದು ನಮೂನೆ-2 ರಲ್ಲಿ ಮಾಹಿತಿ ತುಂಬಿ ತಪ್ಪದೇ ದಿನಾಂಕ: **30-09-2015 ರೊಳಗೆ ಸಂಬಂಧಿಸಿದ ಡಯಟ್ ಗಳಿಗೆ ಕಳುಹಿಸುವುದು. ವಿದ್ಯಾರ್ಥಿಗಳಿಂದ ಬಂದಂತಹ ಡಿ.ಡಿ.ಗಳನ್ನು** ನೇರವಾಗಿ ನಮಗೆ ಕಳುಹಿಸಬಾರದು. ಪರೀಕ್ಷೆ ನಡೆಸಲು ತಗಲುವ ಖರ್ಚನ್ನು ಪ್ರಶ್ನೆಪತ್ರಿಕೆ ಸರಬರಾಜು ಮಾಡುವ ಸಂದರ್ಭದಲ್ಲಿ ವಿತರಿಸಲಾಗುವುದು. ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ಯಾವುದೇ ಕಾರಣಕ್ಕೆ ನಿಮ್ಮ ಬಳಿ ಇಟ್ಟುಕೊಳ್ಳುವಂತಿಲ್ಲ. ವಿದ್ಯಾರ್ಥಿಗಳಿಂದ ಸಂಗ್ರಹವಾದ ಹಣವನ್ನು ಪ್ರಚಾರಕ್ಕೆ ಅಥವಾ ಇತರೆ ಕೆಲಸಗಳಿಗೆ ಬಳಸಬಾರದು.

- NTSE / NMMS ಪರೀಕ್ಷೆಗಳಿಗೆ ಜವಾಬ್ದಾರಿಯುತ **ಗ್ರೂಪ್ – ಬಿ ಹಂತದ ಅಧಿಕಾರಿಗಳನ್ನು ಉಸ್ತುವಾರಿಗಾಗಿ ನೇಮಿಸುವುದು**. ಈ ಪರೀಕ್ಷೆಗಳಲ್ಲಾಗುವ ಎಲ್ಲಾ ಲೋಪ-ದೋಷಗಳಿಗೆ ನೀವೇ ಜವಾಬ್ದಾರರಾಗುವಿರಿ.

- ವಿದ್ಯಾರ್ಥಿಗಳು/ಪೋಷಕರು/ಶಾಲೆಯವರು ಯಾವುದೇ ಕಾರಣಕ್ಕೆ ಅರ್ಜಿಗಳನ್ನಾಗಲೀ ಅಥವಾ ಡಿ.ಡಿ.ಗಳನ್ನಾಗಲಿ ನೇರವಾಗಿ **ಡಿ.ಎಸ್.ಇ .ಆರ್.ಟಿ. ಗೆ ಕಳುಹಿಸಬಾರದು,** ಕಳುಹಿಸಿದ ಪಕ್ಷದಲ್ಲಿ ನಾವು ಜವಾಬ್ದಾರರಲ್ಲ. ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಇನ್ನೊಂದು ಸುತ್ತೋಲೆಯನ್ನು ನಂತರ ನೀಡಲಾಗುವುದು.

- ಹೆಚ್ಚಿನ ಯಾವುದೇ ಮಾಹಿತಿಗೆ **ಡಾ: ಎಂ.ವಿ. ಕೃಷ್ಣಮೂರ್ತಿ,** ಹಿ.ಸ .ನಿ, ಡಿ.ಎಸ್.ಇ .ಆರ್.ಟಿ. ಇವರನ್ನು ದೂರವಾಣಿ ಸಂಖ್ಯೆ: 26422372,26422373,26422374 ಮತ್ತು **9480695458** ಹಾಗೂ **ಪ್ರವೀಣ್.ಬಿ.** ತಾಂತ್ರಿಕ ಸಹಾಯಕರು **9449111320, ಭಾಗ್ಯಲಕ್ಷ್ಮಿ. ಹೆಚ್.ಎಂ.,** ಪ್ರ.ದ . ಸ **9449618838**, ಸಂಪರ್ಕಿಸುವುದು ಅಥವಾ ಸಂಬಂಧಿಸಿದ ಡಯಟ್ ನ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು.

( ಜಯಕುಮಾರ. ಎಸ್ )
ನಿರ್ದೇಶಕರು

ಪ್ರತಿಗಳು:

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಉಪನಿರ್ದೇಶಕರು, (ಆಡಳಿತ) ಎಲ್ಲಾ ಜಿಲ್ಲೆಗಳು.
3. NTSE/NMMS ಪರೀಕ್ಷಾ ನೋಡಲ್ ಅಧಿಕಾರಿಗಳು, ಎಲ್ಲಾ ಡಯಟ್ ಗಳು
4. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು .